## ಇಲ್ಲಿಯವರೆಗೆ



ಧಾರಾಕಾರ ಮಳೆ ಇನ್ನೂ ನಿಂತಿರಲಿಲ್ಲ. ಮಳೆಯದ್ದು ಜಟಿಜಿಟಿ ಒಂದೇ ರಾಗ. ಗಂಗಮ್ಮ, ಅಮರೇಶ, ಮಂಜುನಾಥ ಮುಂತಾದವರಿದ್ದ ಅಬ್ದುಲ್ಲನ ಟೀಮ್ ಟಾಟಾ ಸುಮೋದಲ್ಲಿ ಬರುತ್ತದೆ. ಸುಮೋದ ತುಂಬ ನೆರೆ ಸಂತ್ರಸ್ತರಿಗೆ ಬೇಕಾದ ಬಿಸ್ಕತ್ತು ಪೊಟ್ಟಣ ಮುಂತಾದ ಆಹಾರ ಸಾಮಗ್ರಿ ಇರುತ್ತದೆ. ಜೊತೆಗೆ ಸುಮೋದಲ್ಲಿ ನಾಲ್ಕೈದು ಪೇಪರುಗಳೂ ಇರುತ್ತವೆ. ಎಲ್ಲ ಪೇಪರುಗಳ ಮುಖಪುಟಗಳನ್ನು ತಿರುವಿ ಹಾಕುತ್ತಾನೆ ತಿಮೋತಿ. ಜಲಪ್ರಳಯದಿಂದ ತತ್ತರಿಸಿದ ಜನರಿಗೆ ನಿದ್ದೆಯೇ ಬರುತ್ತಿಲ್ಲ. ಇನ್ನೊಂದೆಡೆ ಡ್ಯಾಂ ಒಡೆದ ಸುದ್ದಿ ಕೇಳಿ ಜನರ ಎದೆಯೇ ಒಡೆದು ಹೋದಂತಹ ಅನುಭವ. ಒಟ್ಟಿನಲ್ಲಿ ಮಳೆಯ ಅಬ್ಬರಕ್ಕೆ ಜನರೆಲ್ಲ ತತ್ತರ.

ಈ ಮಧ್ಯೆ ಕೃಷ್ಣಾ ನದಿ ತೀರದ ಜನರನ್ನು ಸುರಕ್ಷಿತ ಕ್ಯಾಂಪಿಗೆ ಸ್ಥಳಾಂತರಿಸಲಾಗುತ್ತದೆ. ಅಲ್ಲಿ ಪ್ಲಾಸ್ಟಿಕ್ ಶೀಟುಗಳನ್ನು ಕಟ್ಟಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗುತ್ತದೆ. ಊಟಕ್ಕೆ, ಔಷಧಿಗೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಲಾಗುತ್ತದೆ. ತಿಮೋತಿ ಸಂತ್ರಸ್ತರನ್ನು ಮಾತನಾಡಿಸಿ ಅಭಿಪ್ರಾಯ ಸಂಗ್ರಹಿಸುತ್ತಾನೆ. ಬಿಸಿಲೂರಿನ ಮತ್ತೊಂದು ಮಗ್ಗುಲಲ್ಲಿರುವ ತುಂಗಭದ್ರೆ ದಡದಲ್ಲಿರುವ ನತದೃಷ್ಟ ಊರು ಚಿಂತ್ರವೇಲಿಯಲ್ಲಿಯೂ ಇದೇ ಪರಿಸ್ಥಿತಿ.

ಹೇಳಿದರೆ ಅವರು ಅದನ್ನು ಸುತರಾಂ ಒಪ್ಪುವುದಿಲ್ಲ. ‘ಪತ್ರಕರ್ತನದೇನಿದ್ದರೂ ಚಪ್ಲಿ ಹೊಲಿಯುವ ಕೆಲಸ. ಅವನು ತನಗೆ ತಿಳಿದ ಒಳ್ಳೇದನ್ನು ಮಾಡ್ತಲೇ ಇರಬೇಕು. ಬಳ್ದಂಗೆಲ್ಲ ಕಸ ಬುಳುತ್ತ ಅಂತ ಬಳಿಲಾರದ ಇರಕಾಗುತ್ತಾ? ಯಾವನು ಓದ್ಲಿ, ಬಿಡ್ಲಿ; ನನ್ನ ಕೆಲಸ ನನ್ ಮನಸಿಗೆ ತೃಪ್ತಿಯಾಗಂಗ ಮಾಡಿಕೆಂಡು ಹೋದ್ರೆ ಸಾಕಪ. ಯಾವನ್ ಸುದ್ದಿ ಕಟಿಕೆಂಡು ನನಗೇನಾಗಬೇಕು?’ ಅಂತ ಅವರು ಸಮಯ ಬಂದಾಗಲೆಲ್ಲ ಹೇಳ್ತಲೇ ಇದ್ದರು. ಅವರ ಬಗ್ಗೆ ಬಿಸಿಲೂರಿನ ಪತ್ರಕರ್ತರಲ್ಲಿ ಹಲವರಿಗೆ ಅಸೂಯೆ ಕೆಲವರಿಗೆ ಅಭಿಮಾನ.

ಪ್ರವಾಹದ ವಿರುದ್ಧ ಈಜಿ ಇಪ್ಪತ್ತೆರಡು ಜನರನ್ನು ರಕ್ಷಿಸಿದ ಯುವಕನ ಸಾಹಸಗಾಥೆ ಅವರಿಗೆ ಸಿಕ್ಕಿದ್ದು ಕೂಡ ಅವರು ಹೀಗೆ ರೈಲ್ವೇ ಹಳಿ ಮೇಲೆ ಪ್ರಾಣಾಪಾಯ ಲೆಕ್ಕಿಸದೆ ಬೈಕ್ ಓಡಿಸಿಕೊಂಡು ಹೋಗಿ ಆ ಊರಿಗೆ ಮೊದಲು ಭೇಟಿಯಿತ್ತಿದ್ದರಿಂದಾಗಿಯೇ. ಆಚಾರ್ಯರು ಆ ವಿಶೇಷ ವರದಿ ಪ್ರಕಟಿಸಿದ ದಿನ, ಬಹುಪಾಲು ಪತ್ರಿಕೆಗಳಲ್ಲಿ ಮರುದಿನ ರಾಜಧಾನಿಯಲ್ಲಿ ಮಳೆ ಸಂತ್ರಸ್ತರ ಪರಿಹಾರ ಕಾರ್ಯಕ್ಕಾಗಿ ಸಿ.ಎಂ ನಡೆಸಲುದ್ದೇಶಿಸಿರುವ ರೋಡ್ ಶೋದ ಸುದ್ದಿಯೇ ಅಗ್ರಸುದ್ದಿಯಾಗಿ ಪ್ರಕಟವಾಗಿತ್ತು.

ಗಾಡಿ ಜರಕ್ ಜರಕ್ ಎಂದು ಜರುಕು ಹೊಡೆದು ನಿಂತುಕೊಂಡಿತು.

ಅಲ್ಲಿಂದ ಮುಂದಕ್ಕೆ ದಾರಿಯಿರಲಿಲ್ಲ. ರೋಡ್ ಕಟ್ ಆಗಿದ್ದನ್ನು ಕಂಡ ಡ್ರೈವರ್ ಸಡನ್ನಾಗಿ ಬ್ರೇಕ್ ಹಾಕಿ ನಿಲ್ಲಿಸಿದ್ದ. ಅಲ್ಲಿಂದಲೇ ಅನತಿ ದೂರದಲ್ಲಿ ಟಿನ್ ಶೆಡ್‌ಗಳಿಂದ ಮಾಡಿದ ರಿಹ್ಯಾಬಿಲಿಟೇಶನ್ ಕ್ಯಾಂಪು, ಗಂಜಿ ಕೇಂದ್ರದ ಹೊಗೆ, ಆಚೀಚೆ ನಡೆದಾಡುತ್ತಿರುವ ಟಿನ್ ಶೀಟ್‌ಗಳು ಕಾಣಿಸಿದವು. ಹೋಗಿ ನೋಡಿದರೆ ಪರಿಸ್ಥಿತಿ ಭೀಕರವಾಗಿತ್ತು. ಅಲ್ಲೇ ಬಹಿರ್ದೆಸೆ, ಅಲ್ಲೇ ಉಚ್ಚೆ, ಅಲ್ಲೇ ಊಟ, ಕಾಲೆತ್ತಿಡಲೂ ಆಗದಂತಹ ಪಿಚಿಪಿಚಿ ಕೆಸರು, ಗಲೀಜು ಕೊಂಪೆ. ನಿನ್ನೆ ರಾತ್ರಿ ಬೀಸಿದ ಭಾರೀ ಗಾಳಿಗೆ ಶೀಟ್‌ಗಳೆಂಬುವು ತರಗೆಲೆಗಳಂತೆ ಹಾರಿ ಹೋಗಿದ್ದವು. ಸುಮಾರು ದೂರ ಹೊಲದಲ್ಲಿ ಬಿದ್ದಿದ್ದ ಅವುಗಳನ್ನು ಮತ್ತೆ ಎತ್ತಿಕೊಂಡು ಬಂದು ಜೋಡಿಸುವ ಕೆಲಸದಲ್ಲಿ ಕೆಲವರು ನಿರತರಾಗಿದ್ದರು. ಸ್ವಲ್ಪ ದೂರದಲ್ಲಿ ಬೇವಿನ ಮರವೊಂದಕ್ಕೆ ಬಸರೀಗಿಡದ ಬಿಳಲುಗಳಂತೆ ಇಳಿಬಿದ್ದಿದ್ದ ಹಲವಾರು ಹರಕು ಸೀರೆಯ ತೊಟ್ಟಿಲುಗಳಲ್ಲಿ ಪುಟ್ಟ ಕಂದಮ್ಮಗಳು ನಿದ್ದೆಗೆ ಬಂದು ಹಠ ಮಾಡುತ್ತ ಅಳುತ್ತಿದ್ದರೆ, ಸ್ವಲ್ಪ ದೊಡ್ಡ ಹುಡುಗಿಯರು ತೆಲುಗಿನಲ್ಲಿ ಜೋಗುಳ ಹಾಡುತ್ತ ತೂಗುತ್ತಿದ್ದರು. ಅದರಿಂದಾಚೆ ಬಟ್ಟೆಗಳದೊಂದು ದೊಡ್ಡ ಗುಡ್ಡೆಯೇ ಬಿದ್ದಿತ್ತು. ಕೆಲವು ಮಕ್ಕಳು ಉದುದ್ದ ಕೋಲು ಹಿಡಿದುಕೊಂಡು ಆ ಹಳೆಬಟ್ಟೆಗಳನ್ನ ದೂರಕ್ಕೆ ಚಿಮ್ಮುವ ಆಟದಲ್ಲಿ ತೊಡಗಿದ್ದರು. ಕ್ಯಾಂಪಿನಲ್ಲಿನ ಕೆಲವು ಮನೆಗಳು ಖಾಲಿ ಬಿದ್ದಿದ್ದವು.

‘ಎನ್ ತಾತ. ಕೆಲವುದರಾಗ ಮಂದಿನೇ ಇಲ್ಲಲ?’ ಎಂದು ಕಟ್ಟೆಗೆ ಕುಳಿತಿದ್ದ ತಾತನನ್ನು ಮಾತಿಗೆಳೆದ ಅಬ್ದುಲ್ಲ.

‘ಎಲ್ಲ ಊರಾಗೇ ಐದಾರೆಪ್ಪ. ಮನೆ ಬುಟ್ಟು ಬರಂಗಿಲ್ಲ ಅಂತಾರಂತ’

‘ಇನ್ನ ಎರಡು ದಿವಸ ಮಳೆ ಐತಿ ಅಂತಾರ. ನದೀದಂಡೆ ಮನೆಗುಳವರು ಕ್ಯಾಂಪಿಗೆ ಶಿಫ್ಟ್ ಆಗೇಬೇಕು ಅಂತ ಹೇಳಿಲ್ಲ ಅವರಿಗೆ?’

‘ಏನಪ್ಪ ಮತ್ತೆ ಹೇಳಿರಬೇಕು. ಆದ್ರೂನು ಅವರು ಹೆಂಗ ಬರ್ತಾರೆಪ್ಪ? ಶೀಟ್ ಹಾಕಾ ಕೆಲ್ಸಕ್ಕ ಮೊದ್ಲು ಬಂದಿದ್ದೇ ನಾವು. ಹಂಗಾಗಿ ನಾವು ಏಸು ಮಂದಿ ಇದ್ವಿ ಆಸು ಮನಿ ಮೊದ್ಲು ಹಿಡ್ಕಂಡ್ವಿ. ಈಗ ನಮ್ಜತಿ ಇರಂದ್ರೆ ಅವರೆಂಗಿರ್ತಾರ? ನಾವೆಲ್ಲ ಇಲ್ಲಿ ಹರಿಜನರೇ ಅದಿವಿ. ಒಂದಿಬ್ಬರು ತುರುಕರು ಐದಾರ. ಆದ್ರೆ ಮ್ಯಾಗಳ ಮಂದಿಗೆ ಇಲ್ಲಿ ನಮ್ ಜತಿಗಿ ಹೆಂಗ ಜಮಾಸತಾದೆಪ್ಪ?’

‘ಇನ್ನೆರಡು ಮಳೆ ಹೊಡೆದರೆ ಮಣ್ಣಿನ ಮನೆಗುಳು ಓಸು ಬಿದ್ದೋಗ್ತಾವ. ಒಂದೇ ಊರಿಗೆ ಎರಡೆರಡು ಕಡೆ ಟಿನ್ ಶೆಡ್ ಮಾಡಕ್ಕಾಗದಿಲ್ಲ. ಈ ಮಂದಿ ಅರ್ಥ ಮಾಡಿಕೆಬೇಕು’ ಅಂದ ಬಾಲಕೃಷ್ಣ.

‘ದೊಡ್ಡವರಿಗಿ ನಾವೆಂಗ ಹೇಳಕಾಗುತ್ತೆಪ್ಪ? ಗಾ ಅಡಿಗಿ ಮಾತ್ರ ಅವರದು ಅವರು ಬ್ಯಾರೇನೇ ಮಾಡಿಕೆಂತಾರ. ಇಲ್ಲಿಗೆ ಬರದಿಲ್ಲ’ ಅಂದ ಆ ಹಿರಿಯ.

‘ರೇಷನ್?’

‘ಇಲ್ಲಿಗೆ ಬಂದು ಇಳಿಸಿಹೋಗಿದ್ರಾಗೆ ಅರ್ಧರ್ಧ ತಗಂಡು ಹೋಗ್ತಾರ’ ಅಂದ.

‘ಸರ್ ಊರಾಗೂ ಒಂದು ರೌಂಡ್ ಹೋಗಿ ಬರಮು ಬರ್ರಿ’ ಅಂದ ಬಾಲಕೃಷ್ಣ, ತಿಮೋತಿ ಮತ್ತು ಅಬ್ದುಲ್ಲರನ್ನುದ್ದೇಶಿಸಿ. ಅದೂ ಸರಿಯೆನಿಸಿತು. ಮೂವರೂ ಹೊರಟರು.

ಊರು ಎಂಟ್ರಿಯಾಗುತ್ತಿದ್ದಂತೆ ಒಂದು ಗುಡಿಯಿತ್ತು. ಅದರ ಪಕ್ಕದಲ್ಲಿ ಸಾಲಿ. ಅದರಾಚೆ ವ್ಯವಸಾಯ ಸೇವಾ ಸಹಕಾರಿ ಸಂಘದ ಗೋಡೌನು, ಈ ಕಡೆ ಮತ್ಯಾರದೋ ಪ್ರೈವೇಟು ಗೋಡೋನು. ಓಣಿ ತುಂಬ ಮೀನು ಸತ್ತಿರುವ ನೀಚು ವಾಸನೆ. ಗಾಳಿ ಬೀಸಿದಾಗೆಲ್ಲ ನದಿ ಕಡೆಯಿಂದ ತೂರಿ ಬರುವ ಕೊಳತ ಪದಾರ್ಥಗಳ ಘಾಟು ವಾಸನೆ. ಕಟ್ಟಿಕೊಂಡ ಗಟಾರಗಳ ಕಾರುಕಪ್ಪು ಗಲೀಜು ನೀರು ರಸ್ತೆ ಮೇಲೆ ಹರಿದುಹೋಗುತ್ತಿತ್ತು. ಮಣ್ಣಿನ ಮನೆಗಳೆಲ್ಲ ಬಹುಪಾಲು ಬಿದ್ದು ಒಳಗಿನದೆಲ್ಲವನ್ನು ಬಯಲಿಗಿಟ್ಟಿದ್ದವು. ಅಂಗಳದಲ್ಲಿ ಕಟ್ಟಿದ್ದ ಎತ್ತುಗಳು, ನಿಲ್ಲಿಸಿದ್ದ ಟ್ರ್ಯಾಕ್ಟರುಗಳು, ಹೊಲಕ್ಕೆ ನದೀ ನೀರೆತ್ತುವ ಪಂಪ್‌ಸೆಟ್ಟುಗಳು, ಮದುವೆಗೆಂದು